PW-1 ಚಂದ್ರಣ್ಣ

Date: 02.04.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಜೆ ವಕೀಲರಿಂದಃ**

ನನ್ನ ತಾತನ ಹೆಸರು ಗಾದ್ರಿ ಸೂರಯ್ಯ. ಗಾದ್ರಿ ಸೂರಯ್ಯ ರವರ ತಂದೆ ಹೆಸರು ಬಡಸೂರಯ್ಯ. ಗಾದ್ರಿ ಸೂರಯ್ಯ ರವರಿಗೆ ಒಟ್ಟು 5 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರ ಹೆಸರು ಪಾಪಯ್ಯ, ಪಾಲಯ್ಯ, ಸೂರಯ್ಯ, ತಿಪ್ಪಯ್ಯ ಮತ್ತು ನನ್ನ ತಂದೆ ದೊಡ್ಡಯ್ಯ. ಹೆಣ್ಣು ಮಕ್ಕಳ ಹೆಸರು ದೊಡ್ಡಸೂರಮ್ಮ, ಸಣ್ಣಸೂರಮ್ಮ, ತಿಪ್ಪಮ್ಮ ಮತ್ತು ಪಾಲಮ್ಮ ಆಗಿರುತ್ತದೆ.

ದೊಡ್ಡಸೂರಮ್ಮ ರವರ ಗಂಡನ ಹೆಸರು ಕಾಟಯ್ಯ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಅವಾವಿಹಿತರಾಗಿದ್ದರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ತಿಪ್ಪಮ್ಮ ರವರ ಗಂಡನ ಹೆಸರು ಸೂರಯ್ಯ ಅಲಿಯಾಸ್ ಬಕಸೂರಯ್ಯ ಎಂದರೆ ಸರಿ. ಬಕಸೂರಯ್ಯ ರವರ ತಂದೆಯ ಹೆಸರು ಕಾಟಯ್ಯ. ಕಾಟಯ್ಯ ರವರ ಹೆಂಡತಿಯೇ ಗಾದ್ರಿ ಸೂರಯ್ಯ ರವರ ದೊಡ್ಡ ಮಗಳು ದೊಡ್ಡ ಸೂರಮ್ಮ ಎಂದರೆ ಸರಿಯಲ್ಲ. ಗಾದ್ರಿ ಸೂರಯ್ಯ ರವರ ಮಕ್ಕಳು 1964 ರಲ್ಲಿ ಪಾಲುವಿಭಾಗ ವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಪಾಲುವಿಭಾಗ ಪತ್ರವನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಸದರಿ ಪಾಲುವಿಭಾಗದಲ್ಲಿ 6 ಜನರು ಸೇರಿಕೊಂಡು ವಿಭಜನೆ ಮಾಡಿಕೊಂಡರು ಎಂದರೆ ಸರಿಯಲ್ಲ.

ಸದರಿ ಪಾಲುವಿಭಾಗದಲ್ಲಿ ಪಾಪಯ್ಯ, ಪಾಲಯ್ಯ, ಜಗ್ಗಲು ಸೂರಯ್ಯ, ತಿಪ್ಪಯ್ಯ, ದಡ್ಡಯ್ಯ ಮತ್ತು ಸೂರಯ್ಯ ರವರು ವಿಭಜನೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದಲ್ಲಿ ನನ್ನ ತಂದೆ ದಡ್ಡಯ್ಯ ರವರಿಗೆ ಒಟ್ಟು 7 ಷೆಡ್ಯೂಲ್ ಆಸ್ತಿಗಳನ್ನುನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಷೆಡ್ಯೂಲ್ ಗಳಿಗೂ ಮತ್ತು ನಮ್ಮ ಆಸ್ತಿಗಳಿಗೂ ಹೊಂದಾಣಿಕೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸನಂ.127 ರಲ್ಲಿ 2 ಎಕರೆ ಜಮೀನನ್ನು ನನ್ನ ತಂದೆಯ ಭಾಗಕ್ಕೆ ನೀಡಲಾಗಿದೆ ಎಂದರೆ ಸರಿಯಲ್ಲ. ಸನಂ.25 ರಲ್ಲಿ 2 ಎಕರೆ ಜಮೀನನ್ನು ಕೂಡ ನನ್ನ ತಂದೆ ಭಾಗಕ್ಕೆ ನೀಡಲಾಗಿದೆ ಎಂದರೆ ಸರಿಯಲ್ಲ. ಸನಂ.127 ರಲ್ಲಿ ಇನ್ನು 2 ಎಕರೆ ಜಮೀನನ್ನು ನನ್ನ ತಂದೆ ಭಾಗಕ್ಕೆ ನೀಡಲಾಗಿದೆ ಎಂದರೆ ಸರಿಯಲ್ಲ.

ಸನಂ.128 ರಲ್ಲಿ 1 ಎಕರೆ 38 ಗುಂಟೆ ಜಮೀನನ್ನು ನನ್ನ ತಂದೆ ಭಾಗಕ್ಕೆ ನೀಡಲಾಗಿದೆ ಎಂದರೆ ಸರಿಯಲ್ಲ. ಸನಂ.36 ರಲ್ಲಿ 1 ಎಕರೆ ಜಮೀನನ್ನು ನನ್ನ ತಂದೆಯ ಭಾಗಕ್ಕೆ ನೀಡಲಾಗಿದೆ ಎಂದರೆ ಸಾಕ್ಷಿ ನನ್ನ ತಂದೆಗೆ ದಾನದ ಮೂಲಕ ಬಂದಿದೆ ಎಂದು ನುಡಿದಿರುತ್ತಾರೆ. ಸನಂ.88 ರಲ್ಲಿ 2 ಎಕರೆ ಜಮೀನನ್ನು ನನ್ನ ತಂದೆಯ ಭಾಗಕ್ಕೆ ನೀಡಲಾಗಿದೆ ಎಂದರೆ ಸಾಕ್ಷಿ ಸದರಿ ಆಸ್ತಿಗೂ ನಮಗೂ ಯಾವುದೇ ಸಂಬಂದ ಇಲ್ಲ ಎಂದು ನುಡಿದಿರುತ್ತಾರೆ.

ನನ್ನ ತಂದೆ ಮತ್ತು 1 ನೇ ಪ್ರತಿವಾದಿಯ ತಂದೆ ಅಣ್ಣ ತಮ್ಮಂದಿರು ಎಂದರೆ ಸರಿ. ಪಾಪಯ್ಯ ರವರಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿ 4 ಜನ ಎಂದು ನುಡಿದಿರುತ್ತಾರೆ. ಅವರ ಹೆಸರು ಪಾಲಯ್ಯ, ಪಾಪಯ್ಯ, ಸೂರಮ್ಮ ಮತ್ತು ತಿಪ್ಪಮ್ಮ ಆಗಿರುತ್ತಾರೆ.

ನನ್ನ ತಾತ ಗಾದ್ರಿ ಸೂರಯ್ಯ ರವರ ಎರಡನೇ ಮಗ ಗಜ್ಜಿ ಪಾಲಯ್ಯ ರವರ ಮದುವೆ ಆಗಿದ್ದರು ಆದರೆ ಅವರಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದರೆ ಸರಿ. ಆ ಕಾರಣ ಗಜ್ಜಿ ಪಾಲಯ್ಯ ಒಂದನೇ ಪ್ರತಿವಾದಿ ತಿಪ್ಪಮ್ಮ ರವರನ್ನು ಸಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಗಜ್ಜಿ ಪಾಲಯ್ಯ ರವರ ಭಾಗಕ್ಕೆ ಬಂದ ಜಮೀನನ್ನು ಒಂದನೇ ಪ್ರತಿವಾದಿ ತಿಪ್ಪಮ್ಮ ರವರಿಗೆ ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 01.07.1964 ರ ಪಾಲುವಿಭಾಗ ಪತ್ರದಲ್ಲಿ ಗಾದ್ರಿ ಸೂರಯ್ಯ ರವರ ಮಕ್ಕಳು, ಒಂದನೇ ಮಗಳಾದ ಸೂರಮ್ಮ ರವರ ಮಗ ಅಂದರೆ ಒಂದನೆ ಪ್ರತಿವಾದಿಯ ಗಂಡ ಸೂರಯ್ಯ ಅಲಿಯಾಸ್ ಬಕಸೂರಯ್ಯ ರವರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಒಂದನೇ ಪ್ರತಿವಾದಿ ಮತ್ತು ಆಕೆಯ ಗಂಡನಿಗೆ ಹಕ್ಕು ಮತ್ತು ಸ್ವಾಧೀನ ಇದೆ ಎಂದರೆ ಸರಿಯಲ್ಲ. ಅವರ ಸ್ವಾಧೀನಕ್ಕೆ ಅಡ್ಡಿಪಡಿಸಿದಕ್ಕಾಗಿ ನನ್ನ ತಂದೆ, ನನ್ನ ತಂದೆಯ ಸಹೋದರರ ವಿರುದ್ಧ ಒಂದನೇ ಪ್ರತಿವಾದಿ ಹಾಗೂ ಆಕೆಯ ಗಂಡ ಚಿತ್ರದುರ್ಗದ ಮುನ್ಸಿಫ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂ.176/1971 ಅನ್ನು ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ತಮ್ಮ ಪರವಾಗಿ ವಕೀಲರ ನೇಮಕಾತಿಯನ್ನು ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ದಾವೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಗೆ ಸಂಬಂದಿಸಿದ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಸದರಿ ದಾವೆಯಲ್ಲಿ ನನ್ನ ತಂದೆ ಮತ್ತು ಆತನ ಸಹೋದರರು ರಾಜೀ ಮಾಡಿಕೊಂಡು ದಾವಾ ಸ್ವತ್ತುಗಳನ್ನು ಒಂದನೇ ಪ್ರತಿವಾದಿಗೆ ಮತ್ತು ಆಕೆಯ ಗಂಡನಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ನ್ಯಾಯಾಲಯದಿಂದ ರಾಜೀ ಡಿಕ್ರಿಯು ಕೂಡ ಆದೇಶಿಸಲಾಗಿದೆ ಎಂದರೆ ಸರಿಯಲ್ಲ. ಆ ಕಾಲದಿಂದ ಈವರೆಗೆ ದಾವಾ ಸ್ವತ್ತುಗಳಲ್ಲಿ ಒಂದನೇ ಪ್ರತಿವಾದಿಯೇ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನನಗಾಗಲಿ ಮತ್ತು  ನನ್ನ ತಂದೆಗಾಗಲಿ ಯಾವುದೇ ಭಾಗಾಂಶ ಇರುವುದಿಲ್ಲ ಎಂದರೆ ಸರಿಯಲ್ಲ. ರಾಜೀ ಡಿಕ್ರಿ ದಿನಾಂಕ 21.04.1973 ರಲ್ಲಿ ಇತ್ಯರ್ಥ ಆಗಿರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ನನಗೆ ಗೊತ್ತಿದ್ದರುಕೂಡ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹುಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ